ಒಲಿಂಪಿಕ್ಸ್ ಎಂದರೇನು? ಮತ್ತಿನ್ನೇನು: 'ಮಾನವಜಾತಿ ತಾನೊಂದೆ ವಲಂ' ಎನ್ನುವುದರ ಸಾಕಾರರೂಪ ಒಲಿಂಪಿಕ್ಸ್!

ಜಾಗತಿಕ ಮಟ್ಟದಲ್ಲಿ ಎಲ್ಲರನ್ನೂ ಒಂದುಗೂಡಿಸುವ, 'ನಾವೆಲ್ಲರೂ ಒಂದೇ' ಎಂದು ಸಂದೇಶ ಸಾರುವ ಅನೇಕ ವೇದಿಕೆಗಳಿವೆ. ಅದರಲ್ಲಿ ಒಲಿಂಪಿಕ್ಸ್‌ಗೆ ಅಗ್ರಸ್ಥಾನ. ಸ್ಪರ್ಧೆ ಎಷ್ಟೇ ತೀವ್ರವಾಗಿದ್ದರೂ ಒಲಿಂಪಿಕ್ಸ್ ಉದ್ದೇಶ ಸೌಹಾರ್ದ ಸಾಧನೆ. 'ನಾವೆಲ್ಲ ಒಂದೇ ಜಾತಿ, ಒಂದೇ ಕುಲ, ನಾವು ಮನುಜರು' ಎಂಬುದು ಈ ಕ್ರೀಡಾಕೂಟದ ಮುಖ್ಯ ಆಶಯ. ಮನುಷ್ಯ ಕುಲದ ವಿಕಾಸದ ಚರಿತ್ರೆಯಲ್ಲಿ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತಿರುವ ಸುವರ್ಣ ಅಧ್ಯಾಯ ಈ ಜಾಗತಿಕ ಕ್ರೀಡಾಕೂಟ.

ಮೂರು ಸಾವಿರ ವರ್ಷಗಳ ಹಿಂದೆ ನೈರುತ್ಯ ಗ್ರೀಸ್‌ನ ಒಲಿಂಪಿಯ ಬಯಲು ಪ್ರದೇಶ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿ ಗ್ರೀಕರ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ ವಿಜೃಂಭಿಸುತ್ತಿದ್ದವು. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಜುಲೈನಲ್ಲಿ ಅಲ್ಲಿ ನಡೆಯುತ್ತಿದ್ದ ಕ್ರೀಡೆಗಳಿಗೆ 'ಒಲಿಂಪಿಕ್ಸ್' ಎನ್ನುವ ಹೆಸರು ಬಂತು. ಒಲಿಂಪಿಯದಲ್ಲಿ ನಡೆಯುತ್ತಿದ್ದ ಕಾರಣದಿಂದಾಗಿ ಒಲಿಂಪಿಕ್ಸ್ ಎಂದು ಹೆಸರು. ಆಧುನಿಕ ಒಲಿಂಪಿಕ್ಸ್ ಅನ್ನು ಕೂಡ ಬಹುತೇಕ ಇದೇ ಅವಧಿಯಲ್ಲಿ ಆಯೋಜಿಸಲಾಗುತ್ತದೆ. ನೂರಾರು ವರ್ಷಗಳ ಕಾಲ ಪ್ರಾಚೀನ ಒಲಿಂಪಿಕ್ಸ್ ನಡೆದವು. ಗ್ರೀಕ್ ರಾಜ್ಯಗಳೊಡನೆ ಯುದ್ಧ ನಡೆಯುತ್ತಿದ್ದರೂ, ಒಲಿಂಪಿಕ್ ಉತ್ಸವ ಸಮಯದಲ್ಲಿ ಕದನ ವಿರಾಮ ಘೋಷಿಸಲಾಗುತ್ತಿತ್ತು. ಹೀಗಾಗಿ ಮನುಷ್ಯ ಸಂಬಂಧಗಳನ್ನು ಬೆಸೆಯಲು ಹಾಗೂ ಸೌಹಾರ್ದ ಬೆಳೆಸಲು ಈ ಕ್ರೀಡಾಕೂಟ ವೇದಿಕೆಯಾಗಿದೆ.

ಫ್ರಾನ್ಸ್‌ನ ಪಿಯರಿ ಡಿ. ಕೊಬರ್ತಿ ಎಂಬ ಅದಮ್ಯ ಕ್ರೀಡಾಪ್ರೇಮಿಯ ನಿರಂತರ ಪ್ರಯತ್ನದಿಂದಾಗಿ 1896ರಲ್ಲಿ 'ಆಧುನಿಕ ಒಲಿಂಪಿಕ್ಸ್' ಅಥೆನ್ಸ್‌ನಲ್ಲಿ ಆರಂಭವಾಯಿತು. ಮಹಾಯುದ್ಧಗಳ ಕಾರಣದಿಂದಾಗಿ 1916, 1940 ಮತ್ತು 1944ನೇ ಸಾಲಿನ ಕ್ರೀಡಾಹಬ್ಬಗಳನ್ನು ಹೊರತುಪಡಿಸಿದರೆ, ಇಲ್ಲಿಯವರೆಗೆ ನಿರಂತರವಾಗಿ ಒಲಿಂಪಿಕ್ಸ್ ಸ್ಪರ್ಧೆಗಳು ನಡೆದುಕೊಂಡು ಬಂದಿವೆ. ಪ್ರತಿ ಕೂಟದಲ್ಲಿಯೂ ವಿಭಿನ್ನ ದೇಶ, ಸಮುದಾಯಗಳ ನಡುವೆ ಸ್ನೇಹದ ಸೇತುವೆ ಅರಳಿಸಿ, ಮಾನವೀಯ ಮೌಲ್ಯಗಳ ಸಂದೇಶ ಸಾರುವ ಕೆಲಸ ನಿರಂತರವಾಗಿದೆ.

ಒಲಿಂಪಿಕ್ಸ್‌ನ ಚಿಹ್ನೆಯ ಬಣ್ಣಗಳ ಸಂದೇಶ ಕೂಡ ಇದೇ ಆಗಿದೆ. ಒಂದರೊಳಗೊಂದು ಸೇರಿರುವ ಐದು ವರ್ತುಲಗಳು ಆಧುನಿಕ ಒಲಿಂಪಿಕ್ಸ್‌ನ ಚಿಹ್ನೆಯಾಗಿದ್ದು, ನೀಲಿ, ಹಳದಿ, ಕಪ್ಪು, ಹಸಿರು, ಮತ್ತು ಕೆಂಪು ಬಣ್ಣ ಒಳಗೊಂಡಿವೆ. ಇವುಗಳಲ್ಲಿ ಕನಿಷ್ಠ ಒಂದು ಬಣ್ಣ ಜಗತ್ತಿನ ಎಲ್ಲ ದೇಶಗಳ ಧ್ವಜಗಳ ಬಣ್ಣಗಳಲ್ಲಿ ಇರುತ್ತದೆ. ಆದ್ದರಿಂದ ಈ ಚಿಹ್ನೆ ಎಲ್ಲ ದೇಶಗಳ ಏಕತೆ ಸೂಚಿಸುತ್ತದೆ. ಐದು ವರ್ತುಲಗಳು ಐದು ಖಂಡಗಳ ಸಂಕೇತವೂ ಆಗಿವೆ.

ಜಗತ್ತಿನ ಬೇರೆ ಎಲ್ಲ ಕ್ರೀಡಾಕೂಟಗಳಿಗಿಂತ ಒಲಿಂಪಿಕ್ಸ್‌ಗೆ ವಿಶೇಷವಾದ ಸ್ಥಾನ. ಇನ್ನಷ್ಟು



## ಭಾರತಕ್ಕೆ ಒಟ್ಟು 28 ಪದಕ

1900ರ ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಭಾರತ ಪಾಲ್ಗೊಳ್ಳಲು ಆರಂಭಿಸಿದ್ದು, ಇದುವರೆಗೆ 28 ಪದಕಗಳು ಬಂದಿವೆ. ನಾರ್ಮನ್ ಪಿಚರ್ಡ್ ಅಥ್ಲೆಟಿಕ್ಸ್‌ನ ಪುರುಷರ 200 ಮೀಟರ್ ಓಟ ಮತ್ತು 200 ಮೀ. ಹರ್ಡಲ್ಸ್‌ನಲ್ಲಿ ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದರು. ಆದಾದ ಬಳಿಕ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಇದುವರೆಗೆ ಒಂದೂ ಪದಕ ಗೆಲ್ಲಲು ಸಾಧ್ಯವಾಗಿಲ್ಲ.

ಹಾಕಿಯಲ್ಲಿ ಎಂಟು ಚಿನ್ನ, ಒಂದು ಬೆಳ್ಳಿ ಹಾಗೂ ಎರಡು ಕಂಚಿನ ಪದಕಗಳು ಬಂದಿವೆ. ಶೂಟಿಂಗ್‌ನಲ್ಲಿ ನಾಲ್ಕು (ರಾಜವರ್ಧನ್ ಸಿಂಗ್ ರಾಥೋಡ್, ಅಭಿನವ್ ಬಿಂದ್ರಾ, ವಿಜಯಕುಮಾರ್ ಹಾಗೂ ಗಗನ್ ನಾರಂಗ್), ಕುಸ್ತಿಯಲ್ಲಿ ಐದು (ಕೆ.ಡಿ. ಜಾಧವ್, ಸುಶೀಲ್ ಕುಮಾರ್ ಎರಡು ಬಾರಿ, ಯೋಗೇಶ್ವರ ದತ್, ಸಾಕ್ಷಿ ಮಲೀಕ್), ಬ್ಯಾಡ್ಮಿಂಟನ್ ಎರಡು (ಸೈನಾ ನೆಹ್ವಾಲ್ ಹಾಗೂ ಪಿ.ವಿ. ಸಿಂಧು), ಬಾಕ್ಸಿಂಗ್‌ನಲ್ಲಿ ಎರಡು (ವಿಜೇಂದರ್ ಸಿಂಗ್ ಹಾಗೂ ಎಂ.ಸಿ. ಮೇರಿಕೋಮ್), ಟೆನಿಸ್‌ನಲ್ಲಿ ಒಂದು (ಲಿಯಾಂಡರ್ ಪೇಸ್) ಮತ್ತು ವೇಟ್ ಲಿಫ್ಟಿಂಗ್‌ನಲ್ಲಿ ಒಂದು (ಕರ್ಣಂ ಮಲ್ಲೇಶ್ವರಿ) ಪದಕಗಳನ್ನು ತಂದುಕೊಟ್ಟಿದ್ದಾರೆ.